† **Sri K. MALLAPPA.**—I made enquries. 34 applicants have since been given cement permits. All the applicants have been given permits.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಹಶೀಲ್ದಾರರು ಮನಸ್ಸಿಗೆ ಬಂದ ಹಾಗೆ ಸಿಮೆಂಟು ಕೊಡುವುದಕ್ಕೆ ಈಗ ಅವಕಾಶವಿದೆ. ಅದನ್ನು ತಪ್ಪಿಸಿ ಯಾವುದಾದರೂ ಒಂದು ತತ್ವದ ಆಧಾರದ ಮೇಲೆ ಪರ್ಮಿಟ್ಟುಗಳನ್ನು ಕೊಡತಕ್ಕ ನಿಯಮಗಳಿದ್ದರೆ ತಹಶೀಲ್ದಾರರು ಮನಸ್ಸಿಗೆ ಬಂದ ಹಾಗೆ ಪರ್ಮಿಟ್ಟುಗಳನ್ನು ಕೊಡುವುದಕ್ಕಾಗುವುದಿಲ್ಲ. ಅಂಥ ನಿಯಮಗಳು ಏನಾದರೂ ಇವೆಯೇ, ಸ್ವಾಮಿ ?

ಶ್ರೀ ಕೆ. ಮಲ್ಲಪ್ಪ.—ಗ್ರಾಮ ಪಂಚಾಯಿತಿಗಳ ಚೇರ್ಮನ್, ಮುನಿಸಿಪಾಲಿಟಿಗಳ ಅಧ್ಯಕ್ಷರು ಅಥವಾ ಇಂಜಿನಿಯರು, ಇಂಥವರು ಸರ್ಟಿಫಿಕೇಟುಗಳನ್ನು ಕೊಟ್ಟರೆ ಮಾತ್ರ ಅದರಮೇಲೆ ಪರ್ಮಿಟ್ಟುಗಳನ್ನು ಕೊಡತಕ್ಕದ್ದು. ಇಲ್ಲದೆ ಹೋದರೆ ಪರ್ಮಿಟ್ಟುಗಳನ್ನು ಕೊಡುವುದಕ್ಕಾಗುವುದಿಲ್ಲ. ತಹಸೀಲ್ದಾರರು ಪರ್ಮಿಟ್ಟುಗಳನ್ನು ಮನಸ್ಸಿಗೆ ಬಂದ ಹಾಗೆ ಕೊಡುವುದಕ್ಕೆ ಅವಕಾಶವೇನೂ ಇಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಸಿಮೆಂಟು ಇಲ್ಲದೆ ಇದ್ದರೂ ಪರ್ಮಿಟ್ಟುಗಳನ್ನು ಕೊಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಸಿಮೆಂಟ್ ಇದ್ದರೆ ಮಾತ್ರ ಪರ್ಮಿಟ್ಟುಗಳನ್ನು ಕೊಡುತ್ತಾರೆ.

**Mr. SPEAKER.**—Is the Hon'ble Member aware of any instance ?

**Sri S. M. KRISHNA.**—I will inform the Minister.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಸಿಮೆಂಟ್ ಪರ್ಮಿಟ್ಟುಗಳನ್ನು ಕೊಡುವ ಸಂದರ್ಭಗಳಲ್ಲಿ ಅನುಮಾನಾಸ್ಪದವಾದ ಕೆಲವು ಪ್ರಸಂಗಗಳು ನಡೆದಿವೆ. ಲಂಚನಿರೋಧ ಶಾಖೆಯವರು ತನಿಖೆ ನಡೆಸುತ್ತಿದ್ದಾರೆಂದು ವರ್ತಮಾನ ಕೇಳಿದ್ದೇನೆ. ಅದರಲ್ಲಿ ಏನಾದರೂ ಸತ್ಯಾಂಶವಿದೆಯೇ ?

**Sri K. MALLAPPA.**—I have not come across any instance.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸಿಮೆಂಟನ್ನು ಕೊಡುತ್ತಿರುವುದು ಸೊಸೈಟಿಗಳ ಮುಖಾಂತರ ವಲ್ಲವೇ, ಸ್ವಾಮಿ ?

ಶ್ರೀ ಕೆ. ಮಲ್ಲಪ್ಪ.—ಸೆಲ್ಲಿಂಗ್ ಏಜೆಂಟ್ಸ್ ಯಾರಿದ್ದಾರೆಯೋ ಅವರು ಕೊಡುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕುಣಿಗಲ್ ತಾಲ್ಲೂಕಿನಲ್ಲಿ ಯಾವುದಾದರೂ ಸೊಸೈಟಿ ಸೆಲ್ಲಿಂಗ್ ಏಜೆಂಟೇ, ಸ್ವಾಮಿ ?

ಶ್ರೀ ಕೆ. ಮಲ್ಲಪ್ಪ.—ಆ ಸಮಾಚಾರ ನನ್ನಲ್ಲಿಲ್ಲ. ಸೆಲ್ಲಿಂಗ್ ಏಜೆಂಟ್ ಮುಖಾಂತರ ಸಿಮೆಂಟನ್ನು ವಿತರಣೆ ಮಾಡತಕ್ಕದ್ದು ರೂಢಿ.

---

## The Overall Food position of the State.

*Q.—796. **Sri B. BHASKAR SETTY** (Kaup) [on behalf of Sri A. KRISHNA SETTY (Mangalore-11)].—

Will the Government be pleased to state:—

(*a*) what is the overall food position of the State ;

(i) whether it is surplus,
(ii) self-sufficient,
(iii) deficit ;

(*b*) if it is deficit, the steps they propose to take to tide over the crisis ?

*A.*—**Sri M. V. KRISHNAPPA** (Minister for Revenue).—

*a*) (i) No.
(ii) No.
(iii) Yes.

(ಶ್ರೀ ಎಂ. ವಿ. ಕೃಷ್ಣಪ್ಪ)

1,80,000 ಪಲ್ಲ ಬತ್ತವನ್ನು ಕೊಳ್ಳಲಾಯಿತು ; ಆದುದರಿಂದ ಕೇಂದ್ರ ಸರ್ಕಾರದಿಂದ ತರಿಸಿಕೊಳ್ಳಲಿಲ್ಲ. ಈ ತಿಂಗಳು ಐದು ಸಾವಿರ ಟನ್ ಅಲಾಟ್ ಮಾಡಿದ್ದಾರೆ.

ಶ್ರೀ ಬಿ. ಭಾನ್ಕರ ಶೆಟ್ಟಿ.—ಮೂರನೆಯ ಯೋಜನೆಯ ಅಂತ್ಯದಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ನಮ್ಮ ರಾಜ್ಯ ಸ್ವಾವಲಂಬಿಯಾಗಲಿಕ್ಕೆ ಎಷ್ಟು ಹೆಚ್ಚು ಉತ್ಪಾದನೆ ಮಾಡಬೇಕಾಗುತ್ತದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮೈಸೂರು ರಾಜ್ಯಕ್ಕೆ ಪ್ರತಿಯೊಬ್ಬರಿಗೂ 18 ಔನ್ಸ್ ಪ್ರಕಾರ 41 ಲಕ್ಷ ಟನ್ ಆಹಾರ ಧಾನ್ಯಗಳು ಬೇಕಾಗುತ್ತವೆ. ಈಗ 40 ಲಕ್ಷ ಟನ್ ವರೆಗೂ ಮುಟ್ಟಿದ್ದೇವೆ. ಬಹುಶಃ ಮೂರನೆಯ ಯೋಜನೆಯ ಒಳಗೆ ನಾವು ಸ್ವಾವಲಂಬಿಗಳಾಗಬಹುದು. ತಮಿಳುನಾಡು, ಕೇರಳ ಮತ್ತು ಆಂಧ್ರ ಪ್ರದೇಶಗಳಿಂದ ವರ್ಷಕ್ಕೆ ಸರಾಸರಿ ಒಂದು ಲಕ್ಷ ಜನರು ವಲಸೆ ಬರುತ್ತಿದ್ದಾರೆ. ಇದರಿಂದ ನಮ್ಮ ಗುರಿ ಸಾಧನೆಯಲ್ಲಿ ಸ್ವಲ್ಪ ವ್ಯತ್ಯಾಸವಾಗಬಹುದು.

ಶ್ರೀ ಎಸ್. ಎಂ. ಕೃಷ್ಣ.—ಮೂರನೆ ಯೋಜನೆಯಲ್ಲಿ ಸರ್ಕಾರದವರು ಪಂಚವಾರ್ಷಿಕ ಯೋಜನೆಯನ್ನು ರೂಪಿಸಿದಾಗ ಆಹಾರದ ಹೆಚ್ಚುವರಿಯನ್ನು ಎಷ್ಟು ನಿರೀಕ್ಷೆ ಮಾಡಿದ್ದರೋ ಅಷ್ಟನ್ನು ಸಾಧಿಸುವುದಕ್ಕಾಗಲಿಲ್ಲ ಎಂದರೆ ಸರ್ಕಾರದವರು ಒಪ್ಪುತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮೈಸೂರು ಬಗ್ಗೆ ಮಾತ್ರ ಹೇಳುವುದಾದರೆ ಇಲ್ಲಿ ಎಷ್ಟು ನಿರೀಕ್ಷೆ ಮಾಡಿದ್ದೆವೋ ಆ ಗುರಿಯನ್ನು ಸಮೀಪಿಸಿದ್ದೇವೆ. ಮೂರನೆಯ ಯೋಜನೆಯಲ್ಲಿ 41ಲಕ್ಷ ಟನ್ ಬೇಕಾಗಿರುವುದಕ್ಕೆ 40ಲಕ್ಷ ಟನ್ ವರೆಗೂ ಮುಟ್ಟಿದ್ದೇವೆ. ಆಗಲೇ ಹೇಳಿದಂತೆ ತಮಿಳುನಾಡು, ಆಂಧ್ರ ಮತ್ತು ಕೇರಳದಿಂದ ಜನರು ಇಲ್ಲಿಗೆ ಸುಮಾರು ವರ್ಷಕ್ಕೆ ಒಂದು ಲಕ್ಷದಷ್ಟು ಜನ ವಲಸೆ ಬರುತ್ತಿದ್ದಾರೆ. ಯೋಜನೆಯನ್ನು ತಯಾರು ಮಾಡಿದವರು ಈ ಅಂಶವನ್ನು ಗಣನೆಗೆ ತೆಗೆದುಕೊಳ್ಳಲಿಲ್ಲವೆಂದು ಕಾಣುತ್ತದೆ. ಇದರಿಂದ ನಾವು ಖಚಿತವಾಗಿ ಮೂರನೆಯ ಯೋಜನೆಯಲ್ಲಿ ನಮ್ಮ ಗುರಿಯನ್ನು ಮುಟ್ಟುತ್ತೇವೆಯೇ ಎಂಬುದನ್ನು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಗಂಗಾಧರ ನಾಮೋಷಿ:—ಈ ರಾಜ್ಯದ ಅರ್ಧಭಾಗದಲ್ಲಿ ಅಕ್ಕಿ ತಿನ್ನುತ್ತಾರೆ, ಉಳಿದ ಭಾಗದಲ್ಲಿ ಜೋಳ ತಿನ್ನುವವರು ಇದ್ದಾರೆ. ಅವರಿಗೆ ಕಡಮೆ ಬೀಳುವ ಜೋಳವನ್ನು ಪೂರೈಕೆ ಮಾಡುವ ಸಲುವಾಗಿ ಹೊರಗಡೆಯಿಂದ ತರಿಸುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಜೋಳ ನಮ್ಮಲ್ಲಿ ಸರ್‌ಪ್ಲಸ್ ಆಗಿ ಬೆಳೆಯುತ್ತದೆ ಎಂದು ಕೇಳಿದ್ದೇನೆ. ಮೈಸೂರು ಸಂಸ್ಥಾನದಲ್ಲಿ ಜೋಳದ ವಿಷಯದಲ್ಲಿ ಅಷ್ಟೇನೂ ಕೊರತೆ ಇಲ್ಲ. ಮರಾಠವಾಡದಲ್ಲಿ ಬೆಳೆ ಹೆಚ್ಚಾದಾಗ ಈ ಕಡೆಗೆ ಬರುತ್ತದೆ, ಈ ಕಡೆ ಬೆಳೆ ಹೆಚ್ಚಾದಾಗ ಆ ಕಡೆಗೆ ಹೋಗುತ್ತದೆ. ಅಂಥ ಹೆಚ್ಚು ಕೊರತೆಯೇನೂ ಇಲ್ಲ.

ಶ್ರೀ ಸಂಜೀವನಾಥ ಐಕಳ.—ಪ್ರತಿಯೊಬ್ಬರಿಗೂ 18 ಔನ್ಸ್ ಪ್ರಕಾರ ಆಹಾರ ಧಾನ್ಯಗಳು ದೊರಕಬೇಕಾದರೆ ಅಕ್ಕಿ, ಗೋಧಿ, ಜೋಳ ಮತ್ತು ಇತರ ಧಾನ್ಯಗಳು ಯಾವ ಪ್ರಮಾಣದಲ್ಲಿ ಬೇಕಾಗುತ್ತವೆ ? ಒಟ್ಟು ಎಷ್ಟು ಬೇಕಾಗುತ್ತದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಕ್ಕಿ 13,50,000 ಟನ್, ಜೋಳ 12,63,000 ಟನ್, ರಾಗಿ 8 ಲಕ್ಷ ಟನ್ ಹೀಗೆ ಬೇಕಾಗುತ್ತದೆ. ಒಟ್ಟು 12–13 ತರಹ ಧಾನ್ಯಗಳು ಇವೆ. ಇದನ್ನೆಲ್ಲ ಸೇರಿಸಿದರೆ ನಾವು ಸ್ವಾವಲಂಬಿಗಳಾಗಲು ನಮಗೆ 41ಲಕ್ಷ ಟನ್ ಧಾನ್ಯ ಬೇಕಾಗುತ್ತದೆ. ಇದಂಲ್ಲಿ ನಾವು 40 ಲಕ್ಷ ಟನ್ ವರೆಗೂ ಏರಿದ್ದೇವೆ. ಇನ್ನು ಒಂದುಲಕ್ಷ ಟನ್ ಏರಬೇಕಾಗಿದೆ.

ಶ್ರೀ ಗಂಗಾಧರ ನಾಮೋಷಿ.—ಜೋಳ ಸರ್‌ಪ್ಲಸ್ ಇದೆ ಎಂದು ಹೇಳಿದಿರಿ. ಹೋದಸಲ ನಾನು ಹೇಳಿದ್ದೆ—ಕಾಗದ ಬರೆದಿದ್ದೆ. ಕ್ವಿಂಟಾಲ್‌ಗೆ 55 ರೂಪಾಯಿ ಆಗಿದೆ ; ಅಂತಹ ಪರಿಸ್ಥಿತಿಯಲ್ಲಿ ಏನು ಮಾಡುತ್ತೀರಿ ಎಂದು ?

ಶ್ರೀ ಎಂ. ವಿ. ಕೃಷ್ಣಪ್ಪ.—ಜೋಳಕ್ಕೆ ಕಂಟ್ರೋಲ್ ಇಲ್ಲ, ಜೋನಲ್ ರಿಸ್ಟ್ರಿಕ್ಷನ್ ಇಲ್ಲ. ಇಂಡಿಯಾ ದೇಶದ ಯಾವ ಭಾಗದಿಂದಲಾದರೂ ಅದು ಬರಬಹುದು. ಬಿಜಾಪುರ ಅಥವಾ ಗುಲ್ಬರ್ಗದಲ್ಲಿ ಕಡಿಮೆಯಾದರೆ ಅಲ್ಲಿಗೆ ಮರಾಠವಾಡ, ಷೋಲಾಪುರದ ಕಡೆಯಿಂದ ಬರಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆಹಾರದ ವಿಷಯದಲ್ಲಿ ನಮ್ಮ ರಾಜ್ಯ ಸ್ವಯಂ ಪರಿಪೂರ್ಣವಾಗಬೇಕಾದರೆ ಈಗಿರತಕ್ಕ ಪ್ಯಾಕೇಜ್ ಸ್ಕೀಮನ್ನು ಇನ್ನೂ ಹೆಚ್ಚು ಪ್ರದೇಶಕ್ಕೆ ಅನ್ವಯಿಸತಕ್ಕ ಯೋಜನೆ ಈ ಮೂರನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಸರ್ಕಾರದ ಮುಂದೆ ಇದೆಯೇ ?

ಶ್ರೀ ಜಿ. ನಾರಾಯಣ ಗೌಡ (ವ್ಯವಸಾಯಶಾಖೆಯ ಮಂತ್ರಿಗಳು).—ಪ್ಯಾಕೇಜ್ ಸ್ಕೀಂ ಬೇರೆ ಜಿಲ್ಲೆಗಳಿಗೆ ಅನ್ವಯಿಸುವುದು. ಕೇಂದ್ರ ಸರ್ಕಾರದ ಇಚ್ಛೆಗೆ ಅನುಸಾರವಾಗಿ. ಆದರೆ ಬೇರೆ ಜಿಲ್ಲೆಗಳಲ್ಲೂ ತೀವ್ರವಾಗಿ ಬೆಳೆ ಬೆಳೆಯುವುದನ್ನೂ ಸಹ ಸರ್ಕಾರ ಯೋಜನೆ ಮಾಡುತ್ತಾ ಇದೆ.

ಶ್ರೀ ಎಂ. ವಿ. ಶೆಟ್ಟಿ.—ಈ ಪ್ರಾಂತ್ಯ ಸಕ್ಕರೆಯ ವಿಷಯದಲ್ಲಿ ಸ್ವಪರಿಪೂರ್ಣವಾಗಿದೆಯೇ ?